ಶ್ರೀ ಗುರು ನಿತ್ಯಾನಂದಂ ಅವರ ಒಂದೆರಡು ವಿಶೇಷತೆಗಳು
ಸಂತರ ಮಹಾತ್ಮರ ಚರಿತ್ರೆಗಳನ್ನು ಬರೆಯುವುದು ಸ್ವಭಾವಿಕ.ಅವರ ಮಾತುಗಳಿಂದ ಪ್ರಭಾವಿತರಾದವರು,
ಶಿಷ್ಯಭಾವದಿಂದ ನಿಕಟ ಸಂಪರ್ಕಕ್ಕೆ ಬಂದವರು ಈ ಕೆಲಸ ಮಾಡುತ್ತಾರೆ.
ನಾನೂ "ಅಜ್ಜಾ, ನಿಮ್ಮ ಬಗ್ಗೆ ಬರೆಯುತ್ತೇನೆ ಎಂದೆ.
"ಹೌದಾ? ಈನು ಬರೆಯುತ್ತೀರಿ?" ಕಣ್ಣುಗಳಲ್ಲಿ ತುಂಟತನ ಮಿನುಗಿತು.
"ಜೀವನ ಚರಿತ್ರೆ; ಜೊತೆಗೆ ನಿಮ್ಮ ಮಾತುಗಳು."
"ಇಂತಿಂಥವನು,ಇಂತಿಂಥ ದಿನ,ಇಂತಿಂಥ ಊರಲ್ಲಿ,ಇಂತಿಂಥ ತಂದೆತಾಯಿಗಳಿಗೆ ಹುಟ್ಟಿದ.ಇಂಥ ಕೆಲಸ
ಮಾಡಿದ.ಹೆಸರು,ಕೀರ್ತಿ–ಕೊನೆಗೆ ಇಂಥ ತಾರೀಕಿಗೆ ಸತ್ತ.ಇದನ್ನು ಎಲ್ಲರೂ ಬರೆಯುತ್ತಾರಲ್ಲ?ಇದು ಜೀವನ
ಚರಿತ್ರೆಯೋ? ಜೀವ+ನ 'ಜೀವ'ನ ಚರಿತ್ರೆ ಬರೆಯಲು ಸಾಧ್ಯವೋ? ಇವನು ಹುಟ್ಟಿದ್ದು
ಯಾವಾಗ? ಸಾಯುವುದು ಯಾವಾಗ?
ಅತ್ಯುತ್ಸಾಹದಿಂದ ನಾನೆಂದಿದ್ದೆ.
" 'ಜೀವ' ನ ಬಗ್ಗೆ ಬರೆಯುವುದೆ? ತಿಳಿಯಿತಜ್ಜ."
"ಏನು ತಿಳಿಯಿತು? ಅದು ಓದಿ ತಿಳಿದದ್ದು.ನಿಜವಾಗಿಯೂ ತಿಳಿದಿದ್ದರೆ ನೀವು ಹೀಗೋ?"
ಚಾಟಿಏಟು ತಯಾರಾಗಿಯೇ ಇತ್ತು.ನಮ್ಮಲ್ಲೊಂದು ಎಚ್ಚರವನ್ನು ಮೂಡಿಸದೇ ಲೇಖನಿಯನ್ನು
ಕೈಗೆತ್ತಿಕೊಳ್ಳಲು ಬಿಡುವುದಿಲ್ಲ.
ಅಜ್ಜ, ಬಹಳ ಸಲ ಹೇಳುವ ಮಾತು.
"ನಮಗೂ ನಿಮಗೂ ಹೊಂದಾಣಿಕೆಯೇ ಬರುವುದಿಲ್ಲ."
ದೇಹ ನಾನಲ್ಲ ಎಂದು ಸಾರುವ ಅನುಭಾವಿಗೂ, ದೇಹವೇ ನಾನೆಂದು ವ್ಯವಹರಿಸುವ ಜೀವಕ್ಕೂ ಎಲ್ಲಿಯ
ಸಂಬಂಧ?
ಆದರೂ, ಏನೋ ಒಂದು ಒಗತನ, ಹೀಗೆಯೇ ಎಂದು ನಿರೂಪಿಸಲಾಗದ ಸೆಳೆತ ಇದ್ದೇ ಇದೆ.
ಸುಖದ ಹುಡುಕಾಟದಲ್ಲಿರುವ ಪಥಭ್ರಷ್ಟ ಜೀವಕ್ಕೂ, ದಾರಿ ತೋರಿಸುವ ಗುರುತರ ಹೊಣೆಹೊತ್ತ
ಗುರುವಿಗೂ, ಒಂದು ಹಂತದಲ್ಲಿ, ಮುಖಾಮುಖಿಯಾಗಲೇ ಬೇಕು;ಗುರುತು ಸಿಗಲೇ ಬೇಕು.
ಇದಕ್ಕೆ ಅಜ್ಜನೇ ಊರ ಜಾತ್ರೆಯ ಬೇತಾಳನ ಉದಾಹರಣೆಯನ್ನು ಕೊಟ್ಟದ್ದುಂಟು.
"ನಿಮಗೆ ಅವನ ಗುರುತು ಸಿಗುವುದಿಲ್ಲ. ಆದರೆ ಅವನಿಗೆ? ನಿಮ್ಮ ಗುರುತು ಸಿಕ್ಕಿ ಒಮ್ಮೊಮ್ಮೆ ನಿಮ್ಮ ಹತ್ತಿರ
ಬಂದು ನಿಲ್ಲುತ್ತಾನೆ.ಆಗ ನಿಮಗೂ ಅವನ ಗುರುತಾದರೆ?"
ಚಿಂತನೆಗೆ ಹಚ್ಚುವ ಅಜ್ಜನ ಮಾತುಗಳು; ಒಗಟು.
ಲೀಲಾವಿನೋದಿ ಅಜ್ಜ.
ಒಂದು ದಿನ ಸತ್ಸಂಗದಲ್ಲಿ ಅಜ್ಜ ಕೇಳಿದ ಪ್ರಶ್ನೆ.
"ಶರಣಾಗತಿ ಅಂದರೆ ಏನು?"
ಅವರೇ ಕೊಟ್ಟ ಉದಾಹರಣೆ; ಕುಂಡೆಗೆ ಕಚ್ಚಿದ ಇರುವೆ!
ಸ್ವಲ್ಪ ಸ್ವಲ್ಪವಾಗಿ ಹಾವಭಾವಪೂರ್ಣ ಇದನ್ನು ನಿರೂಪಿಸಿದ ರೀತಿಯೋ!
ಹೊಟ್ಟೆ ಹುಣ್ಣಾಗುವಷ್ಟು ನಗು.
ಅಂತಿಂಥ ಇರುವೆ ಅಲ್ಲ; ಅದೊಂದು ಜಾತಿಯ ಕಟ್ಟಿರುವೆ; ಕಚ್ಚಿದರೆ ಪ್ರಾಣ ಸಂಕಟ; ಉರಿನೋವು
ಹೇಳಲಸದಳ.
ಸಭೆಯಲ್ಲಿ ಎದುರು ಕೂತಾಗ, ನೇರ ಗುದದ್ವಾರವನ್ನೇ ಸೇರಿ ಕಚ್ಚಿದ ಇರುವೆ!
ಕಿಕ್ಕಿರಿದ ಸಭೆ. ಆಚೀಚೆ ಅಲ್ಲಾಡುವುದಕ್ಕೂ ಸಾಧ್ಯವಿಲ್ಲವೆಂಬಂತಹ ದಟ್ಟಣೆ; ಎದ್ದು ಹೋಗುವುದು ಅಸಂಭವ.
ಆ ವ್ಯಕ್ತಿಯ ಪಜೀತಿ!

ಕುಂಡೆ ಅಗಲಿಸುವುದು; ಸಂಕೋಚಿಸುವುದು;ನೆಲಕ್ಕೆ ಉಜ್ಜುವುದು....ಊಹೂಂ...ಪರಮಾತ್ಮಾ ನೀನೇ ಗತಿ;
ಒಮ್ಮೆ ಪಾರು ಮಾಡು; ನನ್ನಿಂದೇನೂ ಸಾಧ್ಯವಿಲ್ಲ. ನಾನೇನೂ ಮಡುವಂತಿಲ್ಲವೆಂದು, ಕೊನೆಗೆ
ಅಸಹಾಯಕನಾಗಿ,
ದೇವರಿಗೇ ಶರಣಾಗುವುದು.... ಆದುದಾಗಲಿ ಎನ್ನುವ ಸ್ವೀಕಾರ....
ಎಲ್ಲರಿಗೂ ನಗುವೋ ನಗು.
ಮುಂದಿನ ವಾರ ಸತ್ಸಂಗದಲ್ಲಿ ಅಜ್ಜ ಎಂದಿನಂತೆ
"ಲೇಟೆಸ್ಟ್ ಹಾಡು ಬರಲಿ" ಎಂದಾಗ,
ಹಾಡಿದ್ದು ಯಾವ ಹಾಡು ಗೊತ್ತೇ?
ಕುಂಡೆಗೆ ಕಚ್ಚಿದ ಇರುವೆ!
ಅಜ್ಜನ ಮಾತುಗಳನ್ನು ಒಂದೂ ಬಿಡದೆ, ವ್ಯಕ್ತಿಯ ಪೂರ್ತಿ ಫಜೀತಿಯನ್ನು ಶರಣಾಗತಿಯನ್ನು ಒಳಗೊಂಡುದು!
ಸಭೆ ನಗೆಗಡಲಾದರೆ,
ನಮ್ಮ ಅಜ್ಜ ಮುಕ್ತವಾಗಿ, ದೊಡ್ಡದಾಗಿ, ಸಶಬ್ದವಾಗಿ ನಕ್ಕಿದ್ದೇ ನಕ್ಕಿದ್ದು!
ತುಂಟತನದಿಂದ ನಗುವ ಆ ಕಣ್ಣುಗಳನ್ನು ನೋಡುವುದೇ ಭಾಗ್ಯ.
ಇನ್ನೊಮ್ಮೆ,
ಹೊಸ ಹಾಡು ಆರಂಭವಾದುದೇ "ಹಕ್ಕಿಗಳು ಹಾರುತಿವೆ..."ಎಂಬುದಾಗಿ. ತಮಾಷೆಗೆ ಆರಂಭವಾದುದು
ಇಲ್ಲಿಂದಲೇ.
"ಎಂಥದಿದು? ಹಕ್ಕಿಗಳು ಹಾರುತಿವೆ (ಸ್ವರವನ್ನು ಅಣಕಿಸುತ್ತಾ ರಾಗವಾಗಿ) ಒಂದನೇ ಕ್ಲಾಸಿನ ಮಗುವಿಗೂ
ಗೊತ್ತುಂಟಲ್ಲ? ಹಕ್ಕಿ ಹಾರುತಿದೆ ಎಂದು? ಅದನ್ನು ನೀವು ಹೇಳಬೇಕಾ?....
ನಗುವೋ ನಗು.
ಮುಂದೆ ಒಂದು ಸೊಲ್ಲನ್ನೂ ಹಾಡಲು ಬಿಡದೆ ಶಬ್ದ ಶಬ್ದಕ್ಕೂ ಅಣಕಿಸುತ್ತಲೇ ಇದ್ದು ತಮಾಷೆ ಮಾಡುತ್ತಲೇ
ಹೋಗಿ, ಸಭೆ ನಗೆಗಡಲಾದಾಗ, ಆ ಕಣ್ಣುಗಳಲ್ಲಿ ತುಂಟಾಟವನ್ನು ಗುರುತಿಸಿದ ಎಲ್ಲರಿಗೂ ಖುಷಿಯೋ ಖುಷಿ!
ಆ ತಮಾಷೆ ಮತ್ತು ಖುಷಿ... ಅದೊಂದು ದಾಖಲೆ.
ಆ ದಿನದ ಸಭೆಯಲ್ಲಿದ್ದವರು ಧನ್ಯರು.
ಇದು ನಡೆದುದು ೨೦೦೭ನೇ ಇಸವಿ ಜನವರಿ ೧೮ರಂದು.
ಆಗ ಯಾರಿಗೂ ತಿಳಿಯಲಿಲ್ಲ.
ತಮಾಷಯಲ್ಲಿ ಅಜ್ಜ ಸೂಚನೆ ಕೊಟ್ಟಿರೇ?
ಒಂದೆರಡು ವರ್ಷಗಳಿಂದ ಹೀಗೆ ಸತ್ಸಂಗದಲ್ಲಿ ಸಿಗುವ ಸಂದೇಶಗಳು ಒಂದೂ ಬಿಡದೆ ಹಾಡಾಗುವುದು;
ಈ ವಿನೋದದ ಆಟ ಸಮಾಪ್ತವಾಯಿತು ಎಂದರೇ?
ಅಂದು ನಡೆದುದು ಸಮಾರೋಪ ಸಮಾರಂಭವೇ?
ಆಮೇಲೆ ಈ ವ್ಯಕ್ತಿಗೆ ಅಜ್ಜ ಸಿಕ್ಕಿದ್ದು ಒಂದೇ ಸತ್ಸಂಗ ಮತ್ತು ಅಜ್ಜನ ಅನಾರೋಗ್ಯ.
ಫೆಬ್ರವರಿ ಮೊದಲ ವಾರದಲ್ಲಿಯೇ ಆಸ್ಪತ್ರೆವಾಸಕ್ಕೆ ಮೊದಲಾಯಿತು.
ಮಾರ್ಚ್ ತಿಂಗಳಿನಲ್ಲಿ ಮಹಾಸಮಾಧಿಯಾಯಿತು.

ಪದ್ಮಾ ಶೆಣೈ